"ಓ, ಹೌದಲ್ಲಾ. ಆ ವಿಜ್ಞಾನಿ ಈ ಜೀವಿಗಳಲ್ಲಿಯೇ ಒಂದನ್ನು ದತ್ತು ತೆಗೆದುಕೊಂಡು ಹೋಗಿ ಮಾತು ಕಲಿಸಿದರು, ಶಿಕ್ಷಣ ಕೊಡಿಸಿದರು. ಮನುಷ್ಯರಂತೆಯೇ ಅನ್ನಿಸತೊಡಗಿದ. ಆತನ ನೈಸರ್ಗಿಕ ರೂಢಿಗಳೇನೂ ಬದಲಾಗಲಿಲ್ಲ. ಆದರೆ ಹೆಚ್ಚೆಚ್ಚು ಹೊತ್ತು ಆತ ಭೂಮಿಯ ಮೇಲೆ ಕಳೆಯತೊಡಗಿದ."

"ಆ ವಿಜ್ಞಾನಿ ಈಗಲೂ ಇಲ್ಲಿ ಬರುತ್ತಿರುತ್ತಾರೆಯೇ?"

"ಎಂಟು ವರ್ಷಗಳಾದವು ಅವರು ತೀರಿಕೊಂಡು. ಅವರ ಫೋಟೊ ನಮ್ಮ ಆಫೀಸಿನ ಗೋಡೆಗೆ ತೂಗುಹಾಕಿದ್ದೇವಲ್ಲ."

"ಓ ಅದಾ? ಗೊತ್ತಾಯ್ತು" ಎಂದಳು ಮಿಮಿ. ಎಸ್ಟೆಲ್ಲಾಳಿಗೂ ಗೊತ್ತಾಗಿತ್ತು. ಆದರೆ ಅವಳು ಬೇರೆ ಏನನ್ನೋ ಯೋಚಿಸುತ್ತಿದ್ದಳು.

"ಮತ್ತೆ ಆ ದತ್ತು ಹುಡುಗ?"– ಕೇಳಿದಳು ಎಸ್ಟೆಲ್ಲಾ.

ಮುಖ ಕೆಳಗೆ ಹಾಕಿ ಸ್ವಲ್ಪ ಹೊತ್ತು ಹಾಗೇ ಕುಳಿತು, ನಂತರ ಸಾವರಿಸಿಕೊಂಡು, "ವಿಲ್ಹೆಮ್ ಅವರ ನೆನಪಾದರೆ ನನಗೆ ಹೀಗೇ ಆಗುತ್ತದೆ. ಅರ್ಜೆಂಟ್ ಕೆಲಸ ಇದೆ. ನಾನು ಮತ್ತೆ ನೀರಿಗೆ ಹೋಗೋ ಸಮಯ ಬಂತು. ಆಗಾಗ್ಗೆ ನಾನು ಹೋಗಿ ಬರ್ತಿರಲೇಬೇಕು. ಬರ್ತೀನಿ" ಎನ್ನುತ್ತ ನೀರಿನೊಳಗೆ ಈಜುತ್ತ ಹೋಗಿಬಿಟ್ಟ.

ಇಬ್ಬರೂ ಹುಡುಗಿಯರು ಮೂಕವಿಸ್ಮಿತರಾದರು! ಆ ದತ್ತು ಹುಡುಗನೇ ಈ ವಿಲ್ಲೀ ಅನ್ನೋದು ಗೊತ್ತಾಗಿ ಅವನು ಹೋಗುವುದನ್ನೇ ನೋಡುತ್ತ ಕುಳಿತುಬಿಟ್ಟರು.

ಒಂದಷ್ಟು ಹೊತ್ತಿನ ಮೇಲೆ ಮಿಮಿ ಎದ್ದು ಎಸ್ಟೆಲ್ಲಾಳನ್ನು ತಬ್ಬಿಕೊಂಡು ಸಮಾಧಾನ ಹೇಳಿದಳು. ಎಸ್ಟೆಲ್ಲಾ ಆ ಉಂಗುರನ್ನು ವಿಲ್ಲೀ ಹೋದ ದಿಕ್ಕಿನಲ್ಲೇ ನೀರಿನಲ್ಲಿ ತೂರಿ ನಿಟ್ಟುಸಿರುಬಿಟ್ಟಳು.

---

## ಕ್ಯಾಪ್ಟನ್ ಸುನೀಲ್ ಸುಳೆ

ಸಮುದ್ರಯಾನದಲ್ಲಿ 25 ವರ್ಷಗಳ ಅನುಭವ. ಬಹುರಾಷ್ಟ್ರೀಯ ಶಿಪ್ಪಿಂಗ್ ಕಂಪೆನಿಯೊಂದರಲ್ಲಿ ತರಬೇತಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮುಂಬೈ ನಿವಾಸಿ. ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ವೈಜ್ಞಾನಿಕ ಕತೆಗಳನ್ನು ಬರೆದಿದ್ದಾರೆ. ಮಕ್ಕಳ ಸಾಹಿತ್ಯದಲ್ಲಿ ವಿಶೇಷ ಒಲವು.

## ಹ.ಶಿ. ಭೈರನಟ್ಟಿ

ಭಾರತೀಯ ಜೀವವಿಮಾ ನಿಗಮದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ನಾಲ್ಕು ದಶಕಗಳಿಂದಲೂ ಇತರ ಸಾಹಿತ್ಯ ಪ್ರಕಾರಗಳೊಂದಿಗೆ ವೈಜ್ಞಾನಿಕ ಕಥೆ, ಕಾದಂಬರಿ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. 50ಕ್ಕೂ ಹೆಚ್ಚು ಕತೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. 'ಬೈಲೆಟ್ ಮಾನವ', 'ಟಾಪ್ ಸೀಕ್ರೆಟ್' ಪ್ರಕಟಿತ ಕಥಾಸಂಗ್ರಹಗಳು. 'ಟ್ರಿಪ್ಲೆಟ್ ಸಿಗ್ಮಾ', 'ಸಂಗೀತ ಸಮ್ಮೋಹಿನಿ' ಕಾದಂಬರಿಗಳು. ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ 21 ಕೃತಿಗಳು ಪ್ರಕಟವಾಗಿವೆ.